FRNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-IVA | ಬೆಂಗಳೂರು, ಶನಿವಾರ, ಫೆಬ್ರವರಿ ೨, ೨೦೧೯ (ಮಾಘ ೧೩, ಶಕ ವರ್ಷ ೧೯೪೦) | ನಂ. ೮೬ |
|---|---|---|
| Part-IVA | Bengaluru, Saturday, February 2, 2019 (Magha 13, Shaka Varsha 1940) | No. 86 |



ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 36 ಪಿಜಿಸಿ 2018, ಬೆಂಗಳೂರು, ದಿನಾಂಕ: 30-01-2019.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009ರ (2009ರ ಕೇಂದ್ರ ಅಧಿನಿಯಮ ಸಂಖ್ಯೆ:35) 38ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು, 2012ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ :-

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ತಿದ್ದುಪಡಿ) ನಿಯಮಗಳು, 2018 ಎಂದು ಕರೆಯತಕ್ಕದ್ದು.

(2) ಇವು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 4ರ ತಿದ್ದುಪಡಿ :-** ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು, 2012ರ ನಿಯಮ 4ರಲ್ಲಿ, (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) -

(i) ಉಪ-ನಿಯಮ (7)ರಲ್ಲಿ "ಸ್ಥಳೀಯ ಪ್ರಾಧಿಕಾರ" ಎಂಬ ಪದಗಳಿಗೆ ಬದಲಾಗಿ, "ಆಯುಕ್ತರು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು;

(ii) ಉಪ-ನಿಯಮ (7)ರ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅವಕಾಶ ವಂಚಿತ ಅಥವಾ ದುರ್ಬಲ ವರ್ಗದ ಮಕ್ಕಳ ಪ್ರವೇಶಾತಿಗಾಗಿ ನೆರೆಹೊರೆ ಸರ್ಕಾರಿ ಅಥವಾ ಅನುದಾನಿತ ಶಾಲೆಗಳು ಲಭ್ಯವಿದ್ದಲ್ಲಿ, 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ-ಖಂಡದ ಅಡಿಯಲ್ಲಿ ಬರುವ ಯಾವುದೇ ಅನುದಾನರಹಿತ ಶಾಲೆಯನ್ನು ಗುರುತಿಸತಕ್ಕದ್ದಲ್ಲ."

3. **ನಿಯಮ 8ರ ತಿದ್ದುಪಡಿ:-** ಸದರಿ ನಿಯಮಗಳ 8ನೇ ನಿಯಮದಲ್ಲಿ, (2)ನೇ ಉಪ-ನಿಯಮದ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, 4ನೇ ನಿಯಮದ (7)ನೇ ಉಪ-ನಿಯಮದ ಅಡಿಯಲ್ಲಿ ಗುರುತಿಸಿಲ್ಲದ, 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಶಾಲೆಯು 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಶುಲ್ಕ ಮರುಪಾವತಿಗೆ ಅರ್ಹವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಶರಣಬಸಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪ್ರಭಾರ)

(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦೦

Scanned by CamScanner